

ಶಾಂಕರ ಭಾಷ್ಯಸಮೇತ

# ಈಶಾವಾಸ್ಯ ಉಪನಿಷತ್ತು

ಸ್ವಾಮಿ ವೀರೇಶಾನಂದ



(ಮೂಲ, ಪದಾರ್ಥ, ಅನುವಾದ, ಶಂಕರಭಾಷ್ಯದ ಮೂಲ, ಶಂಕರಭಾಷ್ಯದ ಅನುವಾದ ಹಾಗೂ ಟಿಪ್ಪಣಿಗಳು)

ನಮ್ಮ ಆಧ್ಯಾತ್ಮಿಕ ಪರಂಪರೆಗೆ ಆಧಾರ ಸ್ತಂಭಗಳೇ ಉಪನಿಷತ್ತುಗಳು. ಪ್ರಾಚೀನ ಋಷಿಗಳ ತಪಸ್ಸು, ಚಿಂತನೆ ಮತ್ತು ಧ್ಯಾನಗಳ ಫಲವಾಗಿ ಮೂಡಿಬಂದ ವೇದಗಳಲ್ಲಿ ಶಿಖರಪ್ರಾಯವಾಗಿರುವ ಆತ್ಮತತ್ತ್ವವು ಮೂಡಿಬಂದುದು ಉಪನಿಷತ್ತುಗಳಲ್ಲೇ. ನಮ್ಮ ಎಲ್ಲ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಿಗೆ ಉಪನಿಷತ್ತುಗಳೇ ಉಗಮಸ್ಥಾನ ಎನ್ನಬಹುದು. ಇವುಗಳಲ್ಲಿ ಪ್ರಧಾನವಾದವು ಹತ್ತು ಉಪನಿಷತ್ತುಗಳು. ಅವುಗಳನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಉಪಯುಕ್ತವಾದ ಭಾಷ್ಯವನ್ನು ಶ್ರೀಶಂಕರಾಚಾರ್ಯರು ರಚಿಸಿದ್ದಾರೆ. ಅವರ ವಿವರಣೆಗಳು ಅದ್ವೈತಪರವಾಗಿವೆ; ಆದರೆ ಉಪನಿಷತ್ತುಗಳಿಗೆ ಇವೇ ಅತ್ಯಂತ ಪ್ರಾಚೀನವಾದ ಭಾಷ್ಯಗಳಾಗಿವೆ. ಪರಂಪರಾಗತ ರೀತಿಯಲ್ಲಿ ಉಪನಿಷತ್ತುಗಳನ್ನು ಅರಿತುಕೊಳ್ಳಲು ನಾವು ಈ ಭಾಷ್ಯಗಳನ್ನು ಅವಲಂಬಿಸುವುದೇ ಅತ್ಯುತ್ತಮ ಮಾರ್ಗ. ಈ ದೃಷ್ಟಿಯಿಂದ ಪ್ರಮುಖ ಉಪನಿಷತ್ತುಗಳಿಗೆ ಶ್ರೀಶಂಕರರು ಬರೆದ ಭಾಷ್ಯ ಹಾಗೂ ಅದರ ಅನುವಾದವನ್ನು ಇತರ ವಿವರಣೆಗಳೊಂದಿಗೆ ಇಲ್ಲಿ ನೀಡಲಾಗುತ್ತಿದೆ. ಅನುವಾದವನ್ನು ಆದಷ್ಟು ಸರಳವಾಗಿ ಮಾಡಲಾಗಿದೆ. ಅನುವಾದಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಪ್ರಸ್ತುತ ಬೆಂಗಳೂರು ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಗಳೂ ಲೇಖಕರೂ ಆಗಿರುವ ಅವರು ಹಲವು ಗ್ರಂಥಗಳನ್ನೂ ರಚಿಸಿದ್ದಾರೆ.

## ಶಾಂಕರಭಾಷ್ಯದ ಉಪೋದ್ಘಾತ

**ಈಶಾ ವಾಸ್ಯಮ್ ಇತ್ಯಾದಯೋ ಮಂತ್ರಾಃ ಕರ್ಮಸು ಅವಿನಿಯುಕ್ತಾಃ । ತೇಷಾಮ್ ಅಕರ್ಮಶೇಷಸ್ಯ ಆತ್ಮನೋ ಯಾಥಾತ್ಮ್ಯಪ್ರಕಾಶಕತ್ವಾತ್ । ಯಾಥಾತ್ಮ್ಯಂ ಚ ಆತ್ಮನಃ ಶುದ್ಧತ್ವ-ಅಪಾಪವಿದ್ಧತ್ವ-ಏಕತ್ವ-ನಿತ್ಯತ್ವ-ಅಶರೀರತ್ವ-ಸರ್ವಗತತ್ವಾದಿ ವಕ್ಷ್ಯಮಾಣಮ್ । ತಚ್ಚ ಕರ್ಮಣಾ ವಿರುಧ್ಯತ ಇತಿ ಯುಕ್ತ ಏವ ಏಷಾಂ ಕರ್ಮಸು ಅನಿವಿನಿಯೋಗಃ । ನ ಹಿ ಏವಂ ಲಕ್ಷಣಮ್ ಆತ್ಮನೋ ಯಾಥಾತ್ಮ್ಯಮ್ ಉತ್ಪಾದ್ಯಂ ವಿಕಾರ್ಯಮ್ ಆಪ್ಯಂ ಸಂಸ್ಕಾರ್ಯಂ ವಾ ಕರ್ತೃಭೋಕ್ತೃರೂಪಂ ವಾ ಯೇನ ಕರ್ಮಶೇಷತಾ ಸ್ಯಾತ್ । ಸರ್ವಾಸಾಮ್ ಉಪನಿಷದಾಮ್ ಆತ್ಮಯಾಥಾತ್ಮ್ಯನಿರೂಪಣೇನೈವ ಉಪಕ್ಷಯಾತ್। ಗೀತಾನಾಂ ಮೋಕ್ಷಧರ್ಮಾಣಾಂ ಚ ಏವಂ ಪರತ್ವಾತ್ ।**

**ಈಶಾ ವಾಸ್ಯಮ್** ಎಂದು ಆರಂಭವಾಗುವ ಮಂತ್ರಗಳನ್ನು (ಯಜ್ಞ, ಯಾಗ ಮೊದಲಾದ) ಕರ್ಮಗಳಲ್ಲಿ ಉಪಯೋಗ ಮಾಡಲು ಆಗುವುದಿಲ್ಲ. ಏಕೆಂದರೆ, ಕರ್ಮಗಳ ಭಾಗವಾಗದಿರುವ ಆತ್ಮವು ಹೇಗೆ ಇದೆಯೋ ಅದನ್ನು ಯಥಾವತ್ತಾಗಿ ತಿಳಿಸಲೆಂದೇ ಈ ಮಂತ್ರಗಳು ಹೊರಟಿವೆ. ಆತ್ಮದ ಯಥಾವತ್ತಾದ ಸ್ವರೂಪ ಯಾವುದು ಎಂದರೆ (ಈ ಉಪನಿಷತ್ತಿನ ೭, ೮ ಮಂತ್ರಗಳಲ್ಲಿ ವಿವರಿಸುವ) ಶುದ್ಧವಾಗಿರುವುದು, ಪಾಪದ ಹೊಡೆತ ಇಲ್ಲದಿರುವದು, ಒಂದೇ ತತ್ತ್ವವಾಗಿರುವುದು, ನಿತ್ಯವಾಗಿರುವುದು, ಶರೀರಕ್ಕಿಂತ ಭಿನ್ನವಾಗಿರುವುದು ಮತ್ತು ಎಲ್ಲೆಲ್ಲಿಯೂ ಇರುವುದು ಇವೇ ಆಗಿದೆ. ಇಂಥ ಆತ್ಮತತ್ತ್ವದ ಜ್ಞಾನವು ಕರ್ಮಗಳಿಗೆ ವಿರುದ್ಧವಾಗಿದೆ. ಹೀಗಾಗಿ, ಕರ್ಮಗಳಲ್ಲಿ ಆತ್ಮತತ್ತ್ವವನ್ನು ಹೇಳುವ ಈ ಮಂತ್ರಗಳನ್ನು ಉಪಯೋಗಿಸಲು ಬರುವುದಿಲ್ಲ ಎನ್ನುವುದು ಒಪ್ಪತಕ್ಕದ್ದೇ ಆಗಿರುತ್ತದೆ. ಆತ್ಮದ ನಿಜವಾದ ಸ್ವರೂಪವು ಉತ್ಪತ್ತಿಮಾಡುವಂಥದ್ದಲ್ಲ, ಬದಲಾವಣೆಗೊಳ್ಳುವಂಥಲ್ಲ, (ಹೊರಗಿನ ವಸ್ತುವಿನಂತೆ) ಪಡೆದುಕೊಳ್ಳುವಂಥದ್ದಲ್ಲ ಅಥವಾ ಸಂಸ್ಕರಿಸುವಂಥದ್ದು ಕೂಡ ಅಲ್ಲ. ಹಾಗೇನಾದರೂ ಇದ್ದಿದ್ದರೆ, ಆತ್ಮವು ಕರ್ಮಗಳ ಭಾಗವಾಗಬಹುದಿತ್ತು. ಆದರೆ ಹಾಗಿಲ್ಲ. ಏಕೆಂದರೆ, ಎಲ್ಲ ಉಪನಿಷತ್ತುಗಳು ಕೂಡ ಆತ್ಮದ ಯಥಾವತ್ತಾದ ಸ್ವರೂಪವನ್ನು ತಿಳಿಸುವುದರಲ್ಲಿಯೇ ಕೊನೆಗೊಳ್ಳುತ್ತವೆ. ಭಗವದ್ಗೀತೆ ಮತ್ತು (ಮಹಾಭಾರತದ) ಮೋಕ್ಷಪರ್ವಗಳು ಕೂಡ ಈ ಆತ್ಮವಸ್ತುವನ್ನೇ ತಾತ್ಪರ್ಯವಾಗಿ ಹೊಂದಿವೆ.

**ತಸ್ಮಾತ್, ಆತ್ಮನಃ ಅನೇಕತ್ವ-ಕರ್ತೃತ್ವ-ಭೋಕ್ತೃತ್ವಾದಿ ಚ ಅಶುದ್ಧತ್ವ-ಅಪಾಪವಿದ್ಧತ್ವಾದಿ ಚ ಉಪಾದಾಯ ಲೋಕಬುದ್ಧಿಸಿದ್ಧಂ ಕರ್ಮಾಣಿ ವಿಹಿತಾನಿ। ಯೋ ಹಿ ಕರ್ಮಫಲೇನ ಅರ್ಥೀ ದೃಷ್ಟೇನ ಬ್ರಹ್ಮವರ್ಚಸಾದಿನಾ ಅದೃಷ್ಟೇನ ಸ್ವರ್ಗಾದಿನಾ ಚ ದ್ವಿಜಾತಿರಹಂ,**

**ನ ಕಾಣತ್ವ-ಕುಬ್ಜತ್ವಾದಿ ಅನಧಿಕಾರ-ಪ್ರಯೋಜಕಧರ್ಮವಾನ್ ಇತಿ ಆತ್ಮಾನಂ ಮನ್ಯತೇ ಸಃ ಅಧಿಕ್ರಿಯತೇ ಕರ್ಮಸು ಇತಿ ಹಿ ಅಧಿಕಾರವಿದೋ ವದಂತಿ ।**

ಆತ್ಮನು ಅನೇಕ, ಅವನು ಕರ್ತೃ, ಅವನು ಭೋಕ್ತೃ, ಅವನು ಅಶುದ್ಧನು, ಅವನು ಪಾಪದ ಹೊಡೆತವುಳ್ಳವನು ಎಂದು ಸಾಮಾನ್ಯ ಜನರು ತಿಳಿದುಕೊಂಡಿರುತ್ತಾರೆ. ಅದನ್ನು ಗಣನೆಗೆ ಇಟ್ಟುಕೊಂಡೇ (ವೇದದ ಕರ್ಮಕಾಂಡವು ಅಂಥ ಅಜ್ಞಾನಿಗೆ) ಕರ್ಮಗಳನ್ನು ವಿಧಿಸಿದೆ. ಕರ್ಮಗಳಲ್ಲಿ ಯಾರಿಗೆ ಅರ್ಹತೆ ಇದೆ ಎಂದು ತಿಳಿದುಕೊಂಡಿರುವವರು (ಪಂಡಿತರು) ಹೀಗೆ ತಾನೇ ಹೇಳುತ್ತಾರೆ : ಬ್ರಹ್ಮಚರ್ಯದಿಂದ ಉಂಟಾಗುವ ತೇಜಸ್ಸು ಮುಂತಾದವು (ಈ ಲೋಕದಲ್ಲಿಯೇ) ಕಂಡುಬರುವ ಫಲಗಳು, ಸ್ವರ್ಗ ಮುಂತಾದ ಲೋಕಗಳು ಇಲ್ಲಿ ಕಾಣದೆ ಇರುವ ಫಲಗಳು. ಯಾವನು ಈ ಬಗೆಯ ಕರ್ಮಫಲವನ್ನು ಆಶಿಸುತ್ತಾನೆಯೋ, ಅವನು ಕರ್ಮಗಳಿಗೆ ಅರ್ಹನಾಗುತ್ತಾನೆ. ಇದಲ್ಲದೆ, ''ನಾನು ಬ್ರಾಹ್ಮಣ, ಕುರುಡುತನ ಅಥವಾ ಬೆನ್ನುಗೂನು ಮುಂತಾದ, ನನ್ನನ್ನು ಕರ್ಮಗಳ ಅರ್ಹತೆಯಿಂದ ತಪ್ಪಿಸುವ ದೋಷಗಳು ನನ್ನಲ್ಲಿ ಇಲ್ಲ'' ಎಂದು ತನ್ನನ್ನು ತಾನು (ದೃಢವಾಗಿ) ತಿಳಿದುಕೊಂಡಿರುತ್ತಾನೆಯೋ, ಅವನೇ (ಯಜ್ಞಯಾಗಾದಿಗಳೆಂಬ) ಕರ್ಮಗಳಿಗೆ ಅಧಿಕಾರವನ್ನು (ಅರ್ಹತೆಯನ್ನು) ಹೊಂದಿರುತ್ತಾನೆ.

**ತಸ್ಮಾತ್ ಏತೇ ಮಂತ್ರಾಃ ಆತ್ಮನಃ ಯಾಥಾತ್ಮ್ಯಪ್ರಕಾಶನೇನ ಆತ್ಮವಿಷಯಂ ಸ್ವಾಭಾವಿಕಮ್ ಅಜ್ಞಾನಂ ನಿವರ್ತಯಂತಃ, ಶೋಕಮೋಹಾದಿ-ಸಂಸಾರಧರ್ಮವಿಚ್ಛಿತ್ತಿಸಾಧನಮ್ ಆತ್ಮೈಕತ್ವಾದಿವಿಜ್ಞಾನಮ್ ಉತ್ಪಾದಯಂತಿ ಇತಿ । ಏವಮ್ ಉಕ್ತ ಅಧಿಕಾರಿ-ಅಭಿಧೇಯ-ಸಂಬಂಧ ಪ್ರಯೋಜನಾನ್ ಮಂತ್ರಾನ್ ಸಂಕ್ಷೇಪತೋ ವ್ಯಾಖ್ಯಾಸ್ಯಾಮಃ ॥**

ಹೀಗಾಗಿ, ಈ ಮಂತ್ರಗಳು (ಈಶಾವಾಸ್ಯಂ ಎಂದು ಆರಂಭವಾಗುವ ಮಂತ್ರಗಳು) ಆತ್ಮವಸ್ತುವಿನ ಯಥಾವತ್ತಾದ ಸ್ವರೂಪವನ್ನು ತಿಳಿಸಿಕೊಟ್ಟು, ಆ ಮೂಲಕ ಆತ್ಮನ ಸ್ವಭಾವದ ವಿಷಯದಲ್ಲಿ (ಮನುಷ್ಯರಲ್ಲಿ) ಇರುವ, ಸ್ವಾಭಾವಿಕವಾದ ಅಜ್ಞಾನವನ್ನು ಕಳೆದುಹಾಕುತ್ತ, ಶೋಕ, ಮೋಹ ಮುಂತಾದ ಸಂಸಾರದ ಗುಣಗಳನ್ನು ತೊಲಗಿಸುವ ಆತ್ಮ ಒಂದೇ ಎಂಬ ವಿಶೇಷ ಜ್ಞಾನವನ್ನು ಉಂಟುಮಾಡುತ್ತವೆ. ಆದ್ದರಿಂದ ಈ ಮಂತ್ರಗಳಿಗೆ ಮೇಲೆ ಹೇಳಿದ ಪ್ರಕಾರ, ಅಧಿಕಾರಿ, ಅಭಿಧೇಯ, ಸಂಬಂಧ ಮತ್ತು ಪ್ರಯೋಜನಗಳು ಇರುವುದು ಸಿದ್ಧವಾದ ಕಾರಣದಿಂದ ಸಂಕ್ಷೇಪವಾಗಿ ಇವುಗಳ ವಿವರಣೆಯನ್ನು ನಾವು ನೀಡುತ್ತಿದ್ದೇವೆ.

**ಟಿಪ್ಪಣಿಗಳು**

೧. ಈವರೆಗಿನ ಭಾಷ್ಯವನ್ನು **ಅವತರಣಿಕೆ** ಅಥವಾ **ಉಪೋದ್ಘಾತ** ಎಂದು ಕರೆಯುತ್ತಾರೆ. ಈಶೋಪನಿಷತ್ತಿನಲ್ಲಿ ಬರುವ ಹದಿನೆಂಟು ಮಂತ್ರಗಳು ಯಜುರ್ವೇದ ಸಂಹಿತೆಯ ನಲವತ್ತನೆಯ ಅಧ್ಯಾಯದಲ್ಲಿ ಅಡಕವಾಗಿವೆ. ಮೊದಲ ಮೂವತ್ತೊಂಬತ್ತು ಅಧ್ಯಾಯಗಳ ವಿಷಯ ಯಜ್ಞಯಾಗಾದಿ ಕರ್ಮಗಳು. ಹೀಗಾಗಿ ಈ ಮಂತ್ರಗಳು ಕೂಡ ಅಂಥ ಕರ್ಮಗಳಿಗೆ ಸಂಬಂಧಪಟ್ಟಿರುವ ಮಂತ್ರಗಳೇ ಆಗಿರಬೇಕಲ್ಲವೇ ಎಂಬ ಸಂದೇಹ ಬರಬಹುದು. ಅದಕ್ಕಾಗಿ ಭಾಷ್ಯಕಾರರಾದ ಶ್ರೀಶಂಕರಾಚಾರ್ಯರು, ಅವು ಆತ್ಮವಿದ್ಯೆಯನ್ನು ಉಪದೇಶಿಸುವುದರಿಂದ ಕರ್ಮಗಳ ಸಂಬಂಧ ಅವುಗಳಿಗೆ ಇಲ್ಲ ಎಂದು ಪ್ರತಿಪಾದಿಸುತ್ತಾರೆ. ಏಕೆಂದರೆ, ಉಪನಿಷತ್ತುಗಳಲ್ಲಿ ಹೇಳಿರುವ ಆತ್ಮತತ್ತ್ವವು ಕರ್ಮದ ಕರ್ತೃವಲ್ಲ; ಕರ್ಮಫಲದ ಭೋಕ್ತೃವೂ ಅಲ್ಲ.

೨. ಜಗತ್ತಿನಲ್ಲಿ ಪ್ರತಿಯೊಂದು ವಸ್ತುವೂ ನಾಲ್ಕು ಬಗೆಯ ಬದಲಾವಣೆಗಳನ್ನು ಹೊಂದುತ್ತವೆ: **ಉತ್ಪಾದ್ಯ** (ಹುಟ್ಟುವುದು), **ವಿಕಾರ್ಯ** (ಪರಿವರ್ತನೆಯಾಗುವುದು), **ಆಪ್ಯ** (ಇಲ್ಲದಾಗ ಪಡೆದುಕೊಳ್ಳುವುದು) ಮತ್ತು **ಸಂಸ್ಕಾರ್ಯ** (ದೋಷಗಳನ್ನು ಕಳೆದುಕೊಂಡು ಶುದ್ಧವಾಗುವುದು). ಇವು ಯಾವಾಗಲೂ ಒಂದೇ ರೀತಿಯಲ್ಲಿರುವ ಆತ್ಮನಲ್ಲಿ ಇಲ್ಲ. ಕರ್ಮ ಅಥವಾ ಕ್ರಿಯೆಯು ಯಾವುದೇ ವಸ್ತುವಿನಲ್ಲಿ ಮೇಲೆ ಹೇಳಿದ ನಾಲ್ಕು ಬದಲಾವಣೆಗಳಲ್ಲಿ ಒಂದನ್ನಾದರೂ ಉಂಟುಮಾಡುವುದು. ಆತ್ಮನಲ್ಲಿ ಇದು ಸಾಧ್ಯವಿಲ್ಲ. ಹೀಗಾಗಿ ಆತ್ಮವಿಚಾರವನ್ನು ಉಪದೇಶಿಸುವ ಮಂತ್ರಗಳನ್ನು ಯಾವುದೇ ಕರ್ಮದಲ್ಲಿ ಉಪಯೋಗಿಸಲು ಬರುವುದಿಲ್ಲ.

೩. ಉಪನಿಷತ್ತುಗಳ ಉದ್ದೇಶ ಯಜ್ಞಯಾಗಾದಿ ಕರ್ಮಗಳನ್ನು ಉಪದೇಶಿಸುವುದಲ್ಲ ; ಆತ್ಮವಿದ್ಯೆಯನ್ನು ಉಪದೇಶಿಸುವುದು. ಇವುಗಳನ್ನು ಅನುಸರಿಸುವ ಭಗವದ್ಗೀತೆ ಮತ್ತು ಮಹಾಭಾರತದ ಮೋಕ್ಷಪರ್ವ — ಇವುಗಳಲ್ಲಿಯೂ ಮುಖ್ಯವಾದ ಉಪದೇಶ ಆತ್ಮಜ್ಞಾನವೇ, ಕರ್ಮವಲ್ಲ.

೪. ಯಜ್ಞಯಾಗಾದಿಗಳನ್ನು ವೇದದ ಕರ್ಮಕಾಂಡವು ವಿಧಿಸುತ್ತದೆ. ಅಂದರೆ ಹೀಗೆ ಮಾಡಬೇಕು, ಹೀಗೆ ಮಾಡಬಾರದು ಎಂದು ನಿಯಮವನ್ನು ಮಾಡುತ್ತದೆ. ಅದಕ್ಕಾಗಿ ಕೆಲವು ಅರ್ಹತೆಗಳಿವೆ. ಅಂಥ ಅರ್ಹತೆಗಳನ್ನು ಉಳ್ಳವನು ಮಾತ್ರವೇ ಕರ್ಮಗಳನ್ನು ಮಾಡಲು ಅರ್ಹನಾಗುತ್ತಾನೆ. ಆತ್ಮಸ್ವರೂಪವು ಅವುಗಳನ್ನೆಲ್ಲ ಮೀರಿದ, ಆಕಾಶದಂತೆ ಸರ್ವವ್ಯಾಪಕವಾದ ತತ್ತ್ವ. ಇಂಥ ಆತ್ಮಜ್ಞಾನವನ್ನು ಹೇಳುವ ಮಂತ್ರಗಳನ್ನು ಕರ್ಮಗಳ ಅನುಷ್ಠಾನ ಸಮಯದಲ್ಲಿ ಉಪಯೋಗಿಸಲು ಬರುವುದಿಲ್ಲ.

೫. **ಈಶಾ ವಾಸ್ಯಂ** ಎಂದು ಆರಂಭವಾಗುವ ಉಪನಿಷತ್ತಿನ ಮಂತ್ರಗಳ ಉದ್ದೇಶವೇನು? ಆತ್ಮವು ಹೇಗೆ ಇರುವುದೋ ಅದನ್ನು ಕರಾರುವಾಕ್ಕಾಗಿ ಉಪದೇಶ ಮಾಡುವುದು; ಆ ಮೂಲಕ ಅವಿದ್ಯೆಯ ಕಾರಣದಿಂದ ಮನುಷ್ಯರಲ್ಲಿ ಸಹಜವಾಗಿಯೇ ಇರುವ ಆತ್ಮದ ಬಗೆಗಿನ ಅಜ್ಞಾನವನ್ನು ನಾಶಮಾಡುವುದು ; ಆಜ್ಞಾನವು ನಾಶವಾದರೆ, ಸಂಸಾರ ಅಥವಾ ಅವಿದ್ಯೆಯ ಸ್ಥಿತಿಯಲ್ಲಿ ಕಂಡು ಬರುವ ಶೋಕ, ಮೋಹ ಮುಂತಾದ ಗುಣಗಳನ್ನು ಸಂಪೂರ್ಣವಾಗಿ ತೊಡೆದುಹಾಕುವುದು. ಇದನ್ನು ಮಾಡುವುದಕ್ಕಾಗಿಯೇ ಉಪನಿಷತ್ತು, ಆತ್ಮೈಕತ್ವ ವಿಜ್ಞಾನ, ಅಂದರೆ ಇರುವುದು ಆತ್ಮವೊಂದೇ ಎಂಬ ವಿಶೇಷ ಜ್ಞಾನವನ್ನು ತಿಳಿಸಿಕೊಡುತ್ತದೆ.

೬. ಪ್ರತಿಯೊಂದು ಶಾಸ್ತ್ರಗ್ರಂಥವೂ **ಅನುಬಂಧ ಚತುಷ್ಟಯ**ವನ್ನು ಅಪೇಕ್ಷಿಸುತ್ತದೆ. ಅವು ಹೀಗಿವೆ: **ಅಧಿಕಾರಿ** (ಶಾಸ್ತ್ರವನ್ನು ಅಧ್ಯಯನ ಮಾಡಲು ಇರುವ ಅರ್ಹತೆಗಳನ್ನು ಹೊಂದಿದ ವ್ಯಕ್ತಿ), **ಅಭಿಧೇಯ** (ವಿಷಯ), **ಸಂಬಂಧ** (ವಿಷಯ-ಗ್ರಂಥಗಳ ನಡುವೆ ಇರುವ ಸಂಬಂಧ ಮತ್ತು ವಿಷಯ-ವಿಷಯದ ವಸ್ತುಗಳ ನಡುವೆ ಇರುವ ಸಂಬಂಧ) ಮತ್ತು **ಪ್ರಯೋಜನ** (ವಿಷಯವನ್ನು ತಿಳಿದುಕೊಳ್ಳುವುದರಿಂದ ಆಗುವ ಪ್ರಯೋಜನ). ಉಪನಿಷತ್ತು ಉಪದೇಶಿಸುವ ಆತ್ಮವಿದ್ಯೆಗೂ ಈ ಬಗೆಯ ಅನುಬಂಧ ಚತುಷ್ಟಯವು ಇರುವುದು ಆವಶ್ಯಕ. ಶ್ರೀಶಂಕರಾಚಾರ್ಯರು ಹೇಳುವಂತೆ, ಆತ್ಮವಿದ್ಯೆಯನ್ನು ತಿಳಿದುಕೊಳ್ಳ ಬೇಕೆಂದು ಇಚ್ಛಿಸುವವನು ಅಧಿಕಾರಿ; ಆತ್ಮವಿದ್ಯೆಯೇ ಇಲ್ಲಿ ಅಭಿಧೇಯ ಅಥವಾ ವಿಷಯ. ಇಲ್ಲಿ ಉಪನಿಷತ್ತಿನ ಗ್ರಂಥವು ಆತ್ಮವಿದ್ಯೆಯನ್ನು ಉಪದೇಶಿಸುತ್ತದೆ. ಹಾಗೆಯೇ ಆತ್ಮವಿದ್ಯೆಯು ಆತ್ಮನನ್ನೇ ವಿಷಯಿಯಾಗಿ (ವಿಷಯದ ವಸ್ತು) ಹೊಂದಿದೆ. ಹೀಗಾಗಿ ಆವಶ್ಯಕವಾದ ಸಂಬಂಧವೂ ಆತ್ಮವಿದ್ಯೆಗೆ ಇದೆ. ಕಡೆಯದಾಗಿ, ಈ ಆತ್ಮವಿದ್ಯೆಯಿಂದ ಶೋಕ, ಮೋಹ ಮುಂತಾದ ಅವಿದ್ಯೆಯಿಂದ ಹುಟ್ಟಿದ ಎಲ್ಲ ಸಂಸಾರ ಗುಣಗಳೂ ಆಮೂಲಾಗ್ರವಾಗಿ ನಾಶವಾಗುತ್ತವೆ. ಸಂಸಾರವೆಂದರೆ, ಜನನ-ಮರಣಗಳ ನಿರಂತರ ಸರಣಿ. ಅದು ಉಂಟಾಗುವುದು ಅವಿದ್ಯೆಯಿಂದ. ಈ ಸಂಸಾರದಲ್ಲಿ ಕಂಡುಬರುವುದು ಶೋಕ, ಮೋಹ ಮುಂತಾದ ದುಃಖದಾಯಕವಾದ ದೋಷಗಳು. ಆತ್ಮವಿದ್ಯೆಯಿಂದ ಅವಿದ್ಯೆಯು ನಾಶವಾಗುತ್ತದೆ; ಅವಿದ್ಯೆಯ ನಾಶದಿಂದ ಸಂಸಾರವೂ ಕೊನೆಗೊಳ್ಳುತ್ತದೆ. ಹೀಗಾಗಿ ಸಂಸಾರದ ಗುಣಗಳಾದ ಶೋಕ, ಮೋಹ ಮುಂತಾದವುಗಳೂ ಇಲ್ಲದಾಗುತ್ತವೆ. ಇಂಥ ಅನುಬಂಧ ಚತುಷ್ಟಯವನ್ನು ಹೊಂದಿರುವ ಈಶಾವಾಸ್ಯ ಉಪನಿಷತ್ತಿಗೆ ಸಂಕ್ಷಿಪ್ತವಾಗಿ ವಿವರಣೆಯನ್ನು ನೀಡುತ್ತೇವೆ ಎಂದು ಭಾಷ್ಯಕಾರರು ಇಲ್ಲಿ ಗ್ರಂಥ ಪ್ರತಿಜ್ಞೆಯನ್ನು ಮಾಡುತ್ತಾರೆ.

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ಕೆಲವರು ಹೇಳುತ್ತಾರೆ, ಕೆಲಸಕಾರ್ಯ ಇತ್ಯಾದಿಗಳನ್ನು ಮಾಡುವುದರಿಂದ ಏನನ್ನೂ ಸಾಧಿಸಲಾಗದು, ಯಾವಾಗಲೂ ಜಪ-ಧ್ಯಾನ ಮಾಡಿದರೆ ಮಾತ್ರ ಏನನ್ನಾದರೂ ಸಾಧಿಸ ಬಹುದು ಅಂತ.

**ಶ್ರೀಮಾತೆ :** ಏನು ಮಾಡಿದರೆ ಸಾಧಿಸಬಹುದು, ಏನು ಮಾಡಿದರೆ ಸಾಧಿಸಲಾಗದು ಅಂತ ಅವರಿಗೆ ಹೇಗೆ ತಿಳಿಯಿತಂತೆ ? ಸ್ವಲ್ಪ ದಿನ ಒಂದಿಷ್ಟು ಜಪ-ಧ್ಯಾನ ಮಾಡಿದರೆ ಮುಗಿದು ಹೋಯಿತೆ? ಮಹಾಮಾಯೆ ಮಾರ್ಗವನ್ನು ಬಿಟ್ಟುಕೊಡದಿದ್ದರೆ ಯಾವುದರಿಂದಲೂ ಏನನ್ನೂ ಸಾಧಿಸಲಾಗದು. ಅಂದು ನೀನು ನೋಡಿದೆಯಲ್ಲ, ಒಬ್ಬಾತ ಬಲವಂತವಾಗಿ ಶಕ್ತಿಮೀರಿ ಹೆಚ್ಚು ಜಪಧ್ಯಾನ ಮಾಡಲು ಹೋಗಿ ಅವನಿಗೆ ಹುಚ್ಚು ಹಿಡಿಯಿತು. ಹುಚ್ಚು ಹಿಡಿದರೆ ಇನ್ನೇನು ತಾನೇ ಉಳಿಯಿತು? ಸ್ಕ್ರೂವಿನ ತಿರುಪು ಸ್ವಲ್ಪ ಆ ಕಡೆ, ಸ್ವಲ್ಪ ಈ ಕಡೆ ಸಡಲಿದರೂ ಸಾಕು, ಮಹಾಮಾಯೆಯ ಬಲೆಗೆ ಬಿದ್ದು, ತನಗೆ ತಾನೇ ಭಾವಿಸುತ್ತಾನೆ— ತಾನು ಭಾರೀ ಬುದ್ಧಿವಂತ, ತಾನು ಚೆನ್ನಾಗಿಯೇ ಇದ್ದೇನೆ ಎಂದು. ಅದರ ಬದಲಾಗಿ ವಿರುದ್ಧ ದಿಕ್ಕಿಗೆ ಸ್ಕ್ರೂವನ್ನು ಸ್ವಲ್ಪ ತಿರುಗಿಸಿ ಬಿಗಿಮಾಡಿದರೆ ಅವನು ಸರಿಯಾದ ದಾರಿಯಲ್ಲಿ ನಡೆದು ಶಾಂತಿ, ಆನಂದ ಹೊಂದುತ್ತಾನೆ. ಯಾವಾಗಲೂ ಶ್ರೀರಾಮಕೃಷ್ಣರ ಸ್ಮರಣೆ, ಮನನ ಮಾಡುತ್ತ ಅವರನ್ನು ಪ್ರಾರ್ಥಿಸಬೇಕು. 'ಪ್ರಭೂ, ನನಗೆ ಸದ್ಬುದ್ಧಿ ಕೊಡು' ಅಂತ. ಎಷ್ಟು ಜನರಿಗೆ ಯಾವಾಗಲೂ ಜಪ, ಧ್ಯಾನ ಮಾಡಲು ಸಾಧ್ಯವಿದೆ ? ಆರಂಭದಲ್ಲಿ ಸ್ವಲ್ಪವೇ ಮಾಡಬೇಕು. ಇಲ್ಲದಿದ್ದರೆ ನ-ನಂತೆ ತಲೆ ಬಿಸಿಯಾಗಿ ಅವನು ಅಹಂಕಾರಿಯಾಗುವನು. ಅನಂತರ ಅವನು ಏನೇನೋ ಚಿಂತಿಸಿ ಅಶಾಂತಿ ಹೊಂದುವನು. ಅದಕ್ಕೆ ಬದಲಾಗಿ, ಮನಸ್ಸನ್ನು ಒಂದೆಡೆ ಹಿಡಿದಿಟ್ಟು, ಅದನ್ನು ವಿಹರಿಸಲು ಬಿಡದೆ ಏನಾದರೂ ಕೆಲಸಗಳಲ್ಲಿ ತೊಡಗಿಸುವುದು ಒಳ್ಳೆಯದು. ಮನಸ್ಸು ಸಡಿಲವಾದರೆ ಏನೇನೋ ತೊಂದರೆಯುಂಟಾಗುವುದು. ನನ್ನ ನರೇನ್ ಇದನ್ನೆಲ್ಲ ನೋಡಿಯೇ ನಿಷ್ಕಾಮಕರ್ಮಕ್ಕೆ ಅಡಿಪಾಯ ಹಾಕಿಕೊಟ್ಟ.

*('ಶ್ರೀಶಾರದಾದೇವಿ ವಚನವೇದ', ಪು. ೫೫೦-೫೧)*